<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ವಿರಾಜಪೇಟೆ</u>

<u>ಓಎಸ್ ನಂ:೧೦೮/೧೩</u>

ದಿನಾಂಕ: ೧೨-೦೯-೨೦೧೭ ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.

<u>ಮುಖ್ಯ ವಿಚಾರಣೆ:- ಶ್ರೀ ಕೆ ಪಿ ಬಿ ವಕೀಲರಿಂದ:-</u>

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿಯ ಅಂಶಗಳು ಸತ್ಯವಾಗಿವೆ.

<u>ಪಾಟೀ ಸವಾಲು:- ಶ್ರೀ ಸಿ ಕೆ ಪಿ ವಕೀಲರಿಂದ:-</u>

ನಾನು ಚಿಕ್ಕಮಂಡೂರು ಗ್ರಾಮದವನಾಗಿರುತ್ತೇನೆ. ಈ ದಾವೆಯನ್ನು ಬಿದ್ದಪ್ಪನವರು ಸೋಮಯ್ಯನವರ ವಿರುದ್ದ ಹಾಕಿರುತ್ತಾರೆ. ಈ ದಾವೆಯನ್ನು ಚೆಕ್‌ನ ಕುರಿತಾಗಿ ಹಾಕಿರುತ್ತಾರೆ. ನನಗೆ ಪ್ರತಿವಾದಿ ಹಲವಾರು ವರ್ಷಗಳಿಂದ ಪರಿಚಿತನಿರುತ್ತಾನೆ. ಅವರು ನಲ್ಲೂರು ಗ್ರಾಮದವರಾಗಿರುತ್ತಾರೆ. ಪ್ರತಿವಾದಿ ಬಿಳೂರು ಗ್ರಾಮದವರು ಎನ್ನುವುದು ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರು ಮಾದಯ್ಯ ಎಂದಾಗಿರುತ್ತದೆ. ಲಾಂಚ್‌ಪ್ಯಾಡ್ ಶಾಲೆ ಅರ್ವತೊಕ್ಕಲು ಗ್ರಾಮದಲ್ಲಿರುತ್ತದೆ. ಸದರಿ ಶಾಲೆಯ ಪಾಲುದಾರರು ಯಾರು ಎಂದು ನನಗೆ ಗೊತ್ತಿಲ್ಲ. ಅವರು ಸರ್ಕಾರದಿಂದ ಪರವಾನಗಿ ಪಡೆದು ಶಾಲೆಯನ್ನು ನಡೆಸುತ್ತಿದ್ದರು. ಆ ಶಾಲೆಯನ್ನು ೨೦೦೪ರಲ್ಲಿ ಪ್ರಾರಂಭಿಸಿರುತ್ತಾರೆ. ಆ ಶಾಲೆಯಲ್ಲಿ ಯಾರ್‍ಯಾರು ಎಷ್ಟು ಹಣವನ್ನು ಹೂಡಿದ್ದಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನನ್ನ ಸ್ನೇಹಿತ ಎನ್ನುವುದು ಸರಿ. ಸಾಕ್ಷಿ ಸ್ವತಃ ಊರಿನವರಾಗಿರುತ್ತಾರೆ ಎನ್ನುತ್ತಾರೆ.

ವಾದಿ ಲಾಂಚ್‌ಪ್ಯಾಡ್ ಶಾಲೆಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಗೆ ೨೦೦೪ರಲ್ಲಿ ಸ್ವಲ್ಪ ಹಣವನ್ನು ಕೊಟ್ಟಿದ್ದರು. ಆ ರೀತಿ ಎಷ್ಟು ಹಣವನ್ನು ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸೋಮಯ್ಯನವರು ಆ ಹಣವನ್ನು ೨೦೦೬ನೇ ಇಸವಿಯಲ್ಲಿ ವಾದಿ ಬಿದ್ದಪ್ಪನವರಿಗೆ ಮರುಪಾವತಿ ಮಾಡಿರುತ್ತಾರೆ. ಆ ರೀತಿ ಎಷ್ಟು ಹಣವನ್ನು

ಮರುಪಾವತಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಆ ರೀತಿ ಹಣವನ್ನು ಮರುಪಾವತಿ ಮಾಡಿದಾಗ ನಾನೂ ಕೂಡ ಇದ್ದೆ. ಆ ರೀತಿ ಹಣವನ್ನು ಮರುಪಾವತಿ ಮಾಡುವಾಗ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಸೋಮಯ್ಯನವರು ಆ ಸಮಯದಲ್ಲಿ ಬ್ಲಾಂಕ್ ಚೆಕ್ಕನ್ನು ವಾಪಸ್ಸು ಕೊಡಿ ಎಂದು ಕೇಳಿರುತ್ತಾರೆ ಆದರೆ ವಾದಿ ಬಿದ್ದಪ್ಪನವರು ಕೊಟ್ಟಿರುವುದಿಲ್ಲ. ಆ ರೀತಿ ಕೊಟ್ಟಂತಹ ಬ್ಲಾಂಕ್ ಚೆಕ್ ಕೆನೆರಾ ಬ್ಯಾಂಕ್‌ನ ಚೆಕ್ ಆಗಿರುತ್ತದೆ. ಆ ಸಮಯದಲ್ಲಿ ಒಂದೆರಡು ದಿನಗಳ ನಂತರ ಆ ಬ್ಲಾಂಕ್ ಚೆಕ್ಕನ್ನು ಕೊಡುತ್ತೇನೆಂದು ವಾದಿ ಹೇಳಿದ್ದರು. ಎರಡು ದಿನಗಳ ನಂತರ ನಾನು ಹಾಗೂ ಪ್ರತಿವಾದಿ ಹೋಗಿ ವಾದಿಯ ಬಳಿ ಬ್ಲಾಂಕ್ ಚೆಕ್ಕನ್ನು ಕೇಳಿರುತ್ತೇವೆ. ಆ ರೀತಿ ಎರಡು ಎರಡು ದಿನಗಳ ನಂತರ ೨-೩ ಬಾರಿ ಚೆಕ್ಕನ್ನು ಕೇಳಿರುತ್ತೇವೆ ಆದರೆ ಅವರು ಕೊಟ್ಟಿರುವುದಿಲ್ಲ. ಈ ಬಗ್ಗೆ ಪ್ರತಿವಾದಿ ಪೋಲೀಸರ ಬಳಿ ದೂರನ್ನು ಕೊಟ್ಟಿರುವುದಿಲ್ಲ ಹಾಗೂ ಬ್ಯಾಂಕ್‌ಗೆ ಹಣ ತಡೆಯಲು ಯಾವುದೇ ನಿರ್ದೇಶನ ನೀಡಿರುವುದಿಲ್ಲ.

ಪ್ರತಿವಾದಿ ಬೆಂಗಳೂರಿನ ಹೋಟೆಲ್‌ನಲ್ಲಿದ್ದರು. ಯಾವ ಹೋಟೆಲ್ ಎಂದು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ವಾದಿ ಮತ್ತು ಪ್ರತಿವಾದಿಯ ನಡುವೆ ಲಾಂಚ್‌ಪ್ಯಾಡ್ ಶಾಲೆಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಕಾಣಿಸಿರುವ ಎಲ್ಲಾ ವಿಷಯಗಳು ಸತ್ಯಕ್ಕೆ ದೂರವಾದುದು ಎನ್ನುವುದು ಸರಿಯಲ್ಲ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂಃ ವಿರಾಜಪೇಟೆ.